# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/372/13-14

ದಿನಾಂಕ 05-08-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್** (ಕ.ಆ.ಸೇ)

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀಮತಿ ರೇಣುಕಾ ಗಂಡ ಬಿ. ಹಿರೇಗೌಡ,<br>ಕೆ. ಹೆಚ್. ಬಿ. ಕಾಲೋನಿ, ಬೆಳಗಲ್ಲು ಕ್ರಾಸ್, ಬಳ್ಳಾರಿ<br><br>**(ಶ್ರೀ ಎಸ್. ಜಾವೇದ್ ಪಟೇಲ್, ವಕೀಲರು, ಬಳ್ಳಾರಿ)** | (1) ತಹಶೀಲ್ದಾರರು, ಬಳ್ಳಾರಿ<br>(2) ಕಂದಾಯ ನಿರೀಕ್ಷಕರು, ಬಳ್ಳಾರಿ<br>(3) ಗ್ರಾಮಲೆಕ್ಕಾಧಿಕಾರಿ, ಕೊಳಗಲ್ಲು |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಕೊಳಗಲ್ಲು | 806/A ಪೈಕಿ | 0.05.50 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ಬಳ್ಳಾರಿ ಇವರ ಎಂ ಆರ್ ನಂ 1082/97-98 ದಿನಾಂಕ 19-09-1997 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 09-10-2015, 05-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಕೊಳಗಲ್ಲು ಗ್ರಾಮದ ಸ.ನಂ 806/A ಪೈಕಿ ವಿಸ್ತೀರ್ಣ: 0.05.50 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ಬಳ್ಳಾರಿ ಇವರ ಎಂ ಆರ್ ನಂ 1082/97-98 ದಿನಾಂಕ 19-06-1997 ರಲ್ಲಿ ಹಕ್ಕು ಬದಲಾವಣೆಯನ್ನು ಗೈರು ಮಂಜೂರು ಮಾಡಿರುವ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ವಾದಿಗಳು ನೊಂದಾಯಿತ ಕ್ರಯಪತ್ರ 168/98-99 ದಿನಾಂಕ 13-04-1998 ರಂದು ಕೆ.ಹೆಚ್ ಮುರುಳಿಧರ ಇವರ ಜಿ.ಪಿ.ಎ.ಹೋಲ್ಡರ್ ಶ್ರೀ ಎಂ.ರಘುನಾಥ ಚೌಧರಿ ತಂದೆ ಎಂ ವೆಂಕಟೇಶ್ವರ್ ರಾವ್ ಇವರಿಂದ ಸದರಿ ಜಮೀನನ್ನು ಖರೀದಿಸಿರುತ್ತಾರೆ, ನೊಣದಾಯಿತ ಕ್ರಯ ಪತ್ರದನ್ವಯ ಪಹಣಿಯಲ್ಲಿ ಹಕ್ಕುದಾಖಲೆಯನ್ನು ನಮೂದಿಸುವಂತೆ ಕೋರಿರುತ್ತಾರೆ.

ಪ್ರಕರಣದಲ್ಲಿನ ಲಭ್ಯದಾಖಲೆಗಳನ್ನು ಪರಿಶೀಲಿಸಲಾಗಿ, ಪ್ರಶ್ನಿತ ಹಕ್ಕುಬದಲಾವಣೆ ಸಂಖ್ಯೆ 1082/97-98 ನ್ನು ಕಂದಾಯ ನಿರೀಕ್ಷಕರು ಸಕಾರಣದೊಂದಿಗೆ ತಿರಸ್ಕರಿಸಿರುವುದು ಕಂಡುಬಂದಿರುತ್ತದೆ. ಕೃಷಿಜಮೀನನ್ನು ಅನ್ಯಾತಾ ಕಾರ್ಯಾಕ್ಕೆ ಬಳಸುವಾಗ ಕರ್ನಾಟಕ ಭೂಕಂದಾಯ ಕಾಯ್ದೆ ಕಲಂ 95 ರಡಿ ಸಕ್ಷಮ ಪ್ರಾಧಿಕಾರ ಪೂರ್ವಾನುಮತಿ ಪಡೆಯುವುದು ಕಡ್ಡಾಯ ಆದರೆ ಸದರಿ ಪ್ರಕರಣದಲ್ಲಿ ಕರ್ನಾಟಕ ಭೂಕಂದಾಯ ಕಾಯ್ದೆ ಕಲಂ 95 ರ ಉಲ್ಲಂಘನೆ ಮೇಲ್ನೋಟಕ್ಕೆ ಸಾಬಿತಗುವುದರಿಂದ ಈ ಕೆಳಕಂಡ ಆದೇಶ.

:: ಆದೇಶ ::

**ಮೇಲ್ಮನವಿಯನ್ನು ತಿರಸ್ಕರಿಸಿದೆ.**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನಲೆಯಲ್ಲಿ ಬಳ್ಳಾರಿ ತಾಲ್ಲೂಕಿನ ಕೊಳಗಲ್ಲು ಗ್ರಾಮದ ಸ.ನಂ 806/A ಪೈಕಿ ವಿಸ್ತೀರ್ಣ: 0.05.50 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಾದಿಗಳು ಕ್ರಯಕ್ಕೆ ಪಡೆದ ಜಮೀನಿಗೆ ಸಂಬಂಧಿಸಿದಂತೆ ಕರ್ನಾಟಕ ಭೂಕಂದಾಯ ಕಾಯ್ದೆ ಕಲಂ 95 ಉಲ್ಲಂಘನೆ ಯಾಗಿರುವುದರಿಂದ ಮೇಲ್ಮನವಿಯನ್ನು ತಿರಸ್ಕರಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ, ತಪ್ಪುಗಳನ್ನು ತಿದ್ದಿ, **ದಿನಾಂಕ: 05-08-2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,
ಬಳ್ಳಾರಿ.

ಸಹಾಯಕ ಆಯುಕ್ತರು
ಬಳ್ಳಾರಿ

ಪ್ರತಿಯನ್ನು : ವಾದಿಗಳಿಗೆ ಸಲ್ಲಿಸಿದೆ.